3. ಶ್ರೀ.ನಾರಾಯಣ ಕನಿಹಾಲ್
4. ಶ್ರೀ.ದಾಸರಾವ್ ಅಡ್ವಕೇಟ್
5. ಶ್ರೀ.ಶಿವಮೂರ್ತಿ
6. ಶ್ರೀ.ವಿರೂಪಾಕ್ಷಪ್ಪ
7. ಶ್ರೀ.ಸೋಮಣ್ಣ ದಂಬಳ್
8. ರಂಗಾಚಾರ್.ಟಿ.ಮುಧೋಳ್
9. ಪುಂಡಲೀಕಪ್ಪ ನ್ಯಾನಮೋತಿ
10. ಬಿ.ಮರಿಯಪ್ಪ
11. ಜಿ.ಮಹದೇವಪ್ಪ
12. ಶ್ರೀ.ರಾಘವೇಂದ್ರರಾವ್ ಗುಡ್ಡದ
13. ಶ್ರೀ.ಎಂ.ನಾಗಪ್ಪ
14. ಶ್ರೀ.ಅನಂತ್ ಜೋಷಿ
15. ಶ್ರೀ.ಎ.ವಿ.ಪಾಟೀಲ್
16. ಶ್ರೀ.ರಾಜವೆಂಕಟಪ್ಪ ನಾಯ್ಕ
17. ಶ್ರೀ.ಶರಣಗೌಡ ಪಾಟೀಲ್
18. ಶ್ರೀ ಹಕಿಕತ್‌ರಾಯ್ ಚಿಟಗುಪ್ಕರ್.

1955-56ನೇ ಸಾಲಿನಲ್ಲಿ ನಡೆದ ಗೋವಾ ವಿಮೋಚನಾ ಚಳುವಳಿಯಲ್ಲಿ ಭಗವಹಿಸಿದಂತಹ ಸತ್ಯಾಗ್ರಹಿಗಳಿಗೆ ಪ್ರಮಾಣ ಪತ್ರ ನೀಡಲು ಅಖಿಲ ಭಾರತ ಗೋವಾ ಸತ್ಯಾಗ್ರಹಿಗಳ ಸಂಘ ಕರ್ನಾಟಕ ಶಾಖೆ ಇದರ ಅಧ್ಯಕ್ಷರಾದ ಶ್ರೀ.ಜಿ.ಎಲ್.ರಾಮರೆಡ್ಡಿ ಅವರನ್ನು ಅರ್ಹತಾ ಪತ್ರಗಳನ್ನು ನೀಡಲು ಸರ್ಕಾರ ನೇಮಿಸಿದೆ. ಈ ಮೇಲ್ಕಂಡ ದಾಖಲೆಗಳ ಆಧಾರದ ಮೇಲೆ ರಾಜ್ಯ ಗೌರವಧನವನ್ನು ಮಂಜೂರು ಮಾಡಲಾಗುವುದು.

1993ನೇ ಸಾಲಿನಲ್ಲಿ ಸಾರ್ವತ್ರಿಕ ರಜಾ ದಿನಗಳು

917(1402) ಶ್ರೀ ಕೆ.ಸಿದ್ದಯ್ಯ(ಸಂತೇಮಾರನ ಹಳ್ಳಿ):- ಮಾನ್ಯ ಮುಖ್ಯಮಂತ್ರಿಗಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.

ಅ) 1993ನೇ ಸಾಲಿನಲ್ಲಿ ಸಾರ್ವತ್ರಿಕ ರಜಾ ದಿನಗಳ ಸಂಖ್ಯೆ:

ಆ)

ಅವುಗಳಲ್ಲಿ:

1) ಭಾನುವಾರಗಳ ಸಂಖ್ಯೆ

2) ಎರಡನೇ ಶನಿವಾರಗಳ ಸಂಖ್ಯೆ

3) ಹಬ್ಬದ ದಿನಗಳ ಸಂಖ್ಯೆ

4) ಪರಿಮಿತ ರಜಾ ದಿನಗಳ ಸಂಖ್ಯೆ

5) ಒಂದು ವರ್ಷದಲ್ಲಿ ಸರ್ಕಾರಿ ನೌಕರ ಪಡೆಯುವ ಸಾಂಧರ್ಭಿಕ ರಜಾ ದಿನಗಳ ಸಂಖ್ಯೆ

ಇ) ಈ ದಿಶೆಯಲ್ಲಿ ಅಪಾರ ವೆಚ್ಚತಗಲುವ ಹಿನ್ನಲೆಯಲ್ಲಿ ರಜಾ ದಿನಗಳನ್ನು ಕಡಿಮೆ ಮಾಡುವ ಬಗ್ಗೆ ಸರ್ಕಾರ ಉದ್ದೇಶಿಸಿದೆಯೇ?

ಶ್ರೀ ವೀರಪ್ಪಮೊಯಿಲಿ(ಮುಖ್ಯಮಂತ್ರಿಯವರು):-

ಅ) 81 (ಭಾನುವಾರಗಳೂ ಹಾಗೂ ಎರಡನೆ ಶನಿವಾರಗಳು ಸೇರಿ)

ಆ) 1) 52

2) 12

3) 17(ಭಾನುವಾರಗಳಂದು ಬರುವ ಹಬ್ಬಗಳನ್ನು ಬಿಟ್ಟು)

4) ಘೋಷಿಸಿರುವ ಪರಿಮಿತ ರಜೆಗಳಲ್ಲಿ ಯಾವುದಾದರೂ ಎರಡು ದಿವಸ ರಜೆಯನ್ನು ಸರ್ಕಾರಿ ನೌಕರನು ಪಡೆದುಕೊಳ್ಳಬಹುದು.

5) 15

ಇ) ಪ್ರಸ್ತುತ ಸರ್ಕಾರದ ಮುಂದೆ ಇಂಥಹ ಪ್ರಸ್ತಾವನೆ ಇರುವುದಿಲ್ಲ.

ವಿಶ್ವಬ್ಯಾಂಕ್ ನೆರವಿನಿಂದ ಬೆಂಗಳೂರಿಗೆ ಅರಬನ್ ಟ್ರಾನ್ಸ್‌ಪೋರ್ಟ್ ಪ್ರಾಜೆಕ್ಟ್.

919(1794) ಶ್ರೀ ಆರ್. ದಯಾನಂದರಾವ್(ಗಾಂಧೀನಗರ):- ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ವಿಶ್ವಬ್ಯಾಂಕ್ ನೆರವಿನಂದ ಬೆಂಗಳೂರು ಅರಬನ್ ಟ್ರಾನ್ಸ್‌ಪೋರ್ಟ್ ಪ್ರಾಜೆಕ್ಟ್‌ನ್ನು ಸರ್ಕಾರ ತಯಾರಿಸಿದೆಯೇ?

ಆ) ಹಾಗಿದ್ದರೆ, ಯೋಜನೆಯ ಅಂದಾಜು ವೆಚ್ಚ ಎಷ್ಟು?

ಇ) ವಿಶ್ವಬ್ಯಾಂಕಿಗೆ ಈ ಪ್ರಾಜೆಕ್ಟ್ ರಿಪೋರ್ಟನ್ನು ಸಲ್ಲಿಸಿದೆಯೇ?

ಈ) ಹಾಗಿದ್ದಲ್ಲಿ, ಕಾರಣಗಳೇನು?

ಶ್ರೀ ಚಾಡರೆಡ್ಡಿ (ನಗರಾಭಿವೃದ್ಧಿ ಸಚಿವರು):-